ಅಧ್ಯಕ್ಷರು.—ಈ ತರಹ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಯಾವುದೂ ಕೂಡ ರೆಕಾರ್ಡ್ ಆಗುವುದಿಲ್ಲ. ಶ್ರೀ ದೇವೇಗೌಡರು ಎದ್ದು ನಿಂತಿದ್ದಾರೆ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಉತ್ತರ ಕೊಡಲಿಕ್ಕೆ ಎದ್ದು ನಿಂತಿಲ್ಲ. ನನ್ನ ಹತ್ತಿರ ಸಂಪೂರ್ಣ ಮಾಹಿತಿ ಇಲ್ಲ. ಮಾಹಿತಿ ಇಟ್ಟುಕೊಂಡು ಉತ್ತರ ಕೊಡಬೇಕಾಗುತ್ತದೆ. ತಮ್ಮ ಆಫಿಸಿನಲ್ಲಿರತಕ್ಕ ಒಂದು ಕರಡು ಪ್ರತಿಯ ಉತ್ತರ ಇದೆ, ಅವನ್ನು ತರಿಸಿ ನೋಡಿದೆ. ನೀವು ಈ ವಿಷಯದಲ್ಲಿ ಎಷ್ಟು ತೀವ್ರವಾದ ಕಾಳಜಿ ವಹಿಸುತ್ತಿದ್ದೀರೋ, ಅದಕ್ಕೆ ಕಡಿಮೆ ಇಲ್ಲದಂತೆ ನನ್ನ ಕಡೆಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್, ಶ್ರೀ ವೀರಾಂತ ಹೆಮ್ಮಿಗೆ ಮತ್ತು ಇನ್ನೂ ಅನೇಕರು ಕಠಿಣವಾದ ಪದಗಳನ್ನು ಬಳಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಇಷ್ಟೇ ನಾನು ಹೇಳತಕ್ಕದ್ದು.. ಅವರ ಹತ್ತಿರ ಹೆಚ್ಚಿನ ಮಾಹಿತಿ ಇರಬಹುದು. ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಸರ್ಕಾರ ಇದರಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದರೆ ಹೆಚ್ಚಿನ ವಿವರಣೆ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

ಕೇಂದ್ರ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕೆ ರಾಜ್ಯ ಸರ್ಕಾರದವರ ಮನವಿಯ ಬಗ್ಗೆ

೯೯ (೧೫೬) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ). —ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೇಂದ್ರ ಸರಕಾರವು ನೇರವಾಗಿಯೇ ಬರ ಪರಿಹಾರಕ್ಕೆಂದು ಯಾವುದೇ ಮರಳಿ ಪಾವತಿ ಮಾಡುವ ಮುಂಬರುವ ಯೋಜನಾ ವೆಚ್ಚದಲ್ಲಿ ಮುರಿದುಕೊಳ್ಳದೇ ಕಟ್ಟು ಕರಾರು ಹಾಕದೇ ರಾಜ್ಯ ಸರ್ಕಾರಕ್ಕೆ ಕೂಡ ಮಾರಿದ ಹಣ ಎಷ್ಟು? (೧೯೮೫, ೧೯೮೬, ಮತ್ತು ೧೯೮೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬರಗಾಲ ಪರಿಹಾರಕ್ಕೆ ಕೊಟ್ಟ ಹಣ ವಿವರಣೆ ಒದಗಿಸುವುದು).

ಆ) ಕೇಂದ್ರ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕೆ ರಾಜ್ಯ ಸರ್ಕಾರದವರು ಈಗ ಏನಾದರೂ ಮನವಿ ಸಲ್ಲಿಸಿದ್ದಾರೆಯೆ ?

ಇ) ಹಾಗಿದ್ದಲ್ಲಿ ಯಾವ ರೀತಿ ಮನವಿ ಸಲ್ಲಿಸಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ಸಾಮಾನ್ಯವಾಗಿ ಕೇಂದ್ರವು ರಾಜ್ಯ ಸರ್ಕಾರಗಳಿಗೆ ಅಭಾವ ಪರಿಹಾರಕ್ಕೆಂದು ಒದಗಿಸಿಕೊಡುವ ಕೇಂದ್ರ ಧನ ಸಹಾಯವನ್ನು ಯೋಜನಾ ಮುಂಗಡದ ಹಣವೆಂದು ಪರಿಗಣಿಸಿ ಕೊಡುತ್ತದೆ. ಹೀಗೆ ಕೊಡಲ್ಪಡುವ ಹಣವನ್ನು ಸಾಮಾನ್ಯವಾಗಿ ರಾಜ್ಯ ಸರ್ಕಾರದ ಒಟ್ಟು ಯೋಜನಾ ಮಿತಿಯ ಪ್ರತಿ ಶತ ೫ರಷ್ಟು ಸೀಮಿತವಾಗಿ ಒದಗಿಸಿಕೊಡುತ್ತದೆ. ಹೀಗೆ ಕೇಂದ್ರ ಸರ್ಕಾರವು ಕೂಡಮಾಡಿದ ಧನ ಸಹಾಯದ ವಿವರಗಳು ಈ ಕೆಳಕಂಡತಿವೆ.

೧.	೧೯೮೪-೮೫	೩೨.೭೩ ಕೋಟಿ	ರೂಪಾಯಿಗಳು
೨.	೧೯೮೫-೮೬	೫೨.೪೨	ಡಿಟೋ
೩.	೧೯೮೬-೮೭	೫೩.೮೨	ಡಿಟೋ

ಆ) ಹೌದು.

ಇ) ಈ ಮನವಿ ಪತ್ರದಲ್ಲಿ ಒಟ್ಟು ೨೦೯.೦೦ ಕೋಟಿ ರೂಪಾಯಿಗಳು ಕೇಂದ್ರ ಧನ ಸಹಾಯವನ್ನು ಕೋರಲಾಗಿದೆ. ಈ ಮನವಿ ಪತ್ರದ ಒಂದು ಪ್ರತಿಯನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ಒದಗಿಸಿಕೊಡಲಾಗಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಇದು ಮುಂಬರುವ ಯೋಜನೆಯಲ್ಲಿ ಮುಂಗಡವಾಗಿ ಕೊಟ್ಟಂಥ ಹಣ. ಆದರೆ ಬರಗಾಲಕ್ಕೆಂದೇ, ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಗ್ರಾಂಟ್ ಮಾಡಿದ್ದಾರೆ ?

ಶ್ರೀ ವೀರಣ್ಣ (ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಬರಗಾಲಕ್ಕೆಂದೇ ಕೇಂದ್ರಸರ್ಕಾರದವರು ಯಾವ ಗ್ರಾಂಟ್‌ನ್ನೂ ಮಾಡಿಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಬರಗಾಲಕ್ಕೆಂದು ಹೇಳಿ ಎಷ್ಟು ಹಣವನ್ನು ಅನುದಾನವೆಂದು ಕೊಟ್ಟಿದ್ದಾರೆ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಅನುದಾನ ಎನ್ನತಕ್ಕಂಥ ಯಾವುದೇ ಹಣವನ್ನು ಕೊಟ್ಟಿಲ್ಲ. ನಾವು ಕೇಂದ್ರಸರ್ಕಾರದವರನ್ನು ಈ ವಿಚಾರವಾಗಿ ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ ಈಗ್ಗೆ ೪ ವರ್ಷಗಳಿಂದ ಕರ್ನಾಟಕದಲ್ಲಿ ತೀವ್ರ ಬರಗಾಲ ಇರುವುದರಿಂದ, ನೀವು ಯೋಜನಾ ವೆಚ್ಚದಲ್ಲಿ ಮುಂಗಡವಾಗಿ ಕೊಡತಕ್ಕಂಥ ಪ್ರೊಸೀಜರ್ ನಿಲ್ಲಿಸಿ, ಎಷ್ಟು ಹಣವನ್ನು ಕೊಡುತ್ತಿದ್ದೀರಿ, ಅದನ್ನು ಗ್ರಾಂಟ್ ಎಂದು ಕೂಡಿ, ಎಂಬುದಾಗಿ ಕೇಂದ್ರಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಈಗಾಗಲೇ ೨೦೯ ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇದರಲ್ಲಿ ವಿವಿಧ ಬಾಬುಗಳೂ ಸೇರಿವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಕೇಂದ್ರಸರ್ಕಾರದ ಈ ಧೋರಣೆಯಿಂದ ರಾಜ್ಯಸರ್ಕಾರದ ಯೋಜನೆಗಳಿಗೆ ಏನಾದರೂ ಹೊಡೆತ ಬೀಳುತ್ತದೆಯೇ ?

ಶ್ರೀ ವೀರಣ್ಣ.—ಮಾನ್ಯ ಸದಸ್ಯರು ಹೇಳುತ್ತಿರುವುದು ನೂರಕ್ಕೆ ನೂರರಷ್ಟು ಸತ್ಯ ಕೇಂದ್ರದವರು ಕೊಡತಕ್ಕ ಹಣವನ್ನು ಗ್ರಾಂಟ್ ಎಂದು ಕನ್ವರ್ಟ್ ಮಾಡದೇಹೋದರೆ ಮುಂಬರುವ ವರ್ಷಗಳಲ್ಲಿ ರಾಜ್ಯದ ಯೋಜನೆಗಳಿಗೆ ಬಲವಾದ ಹೊಡೆತ ಬೀಳುತ್ತದೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮನವಿ ಪತ್ರದ ೧೨ನೇ ಪುಟದಲ್ಲಿ ಏನಿದೆ ಎಂದರೆ,

'Area shown in Gadag, Haveri, Kundagoal, Mundargi, Navalgund, Ranibennur, Ron and Savanur taluks has been poor. Ground nut crop is affected.' ಎಂದು ಕೊಟ್ಟಿದ್ದೀರಿ. ನಮ್ಮ ರೋಣ ತಾಲ್ಲೂಕಿನ ಬಿತ್ತನೆ ಕೆಲಸ ಕೆಲವು ಭಾಗಗಳಲ್ಲಿ ಮಾತ್ರ ಆಗಿದೆ ಎಂದು ಹೇಳಿದ್ದೀರಾ, ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಹೇಳಿಲ್ಲ. ಇದನ್ನು ಏನಾದರೂ ಸರಿ ಮಾಡಿಕೊಳ್ಳುತ್ತೀರಾ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಎನ್‌ಕ್ವೈರಿ ಮಾಡಿ, ಸೂಕ್ತ ವರದಿ ತರಿಸಿ, ಅಭಾವ ಪೀಡಿತ ಪ್ರದೇಶ ಎಂದು ಕಂಡುಬಂದರೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಹೆಚ್. ಪಾಟೀಲ್.—ಹಾಗದರೆ ನೀವು ಎನ್‌ಕ್ವೈರಿ ಮಾಡದೇ ಸೆಂಟ್ರಲ್ ಗವರ್ನಮೆಂಟ್‌ಗೆ ಫಾಲ್ಸ್ ವರದಿ ಕೊಟ್ಟಿದ್ದೀರಾ ? ಗದಗ್ ಮತ್ತು ರೋಣ ತಾಲ್ಲೂಕುಗಳನ್ನು ಬಿಟ್ಟಬಿಟ್ಟಿದ್ದೀರಿ. ಈ ರೀತಿ ಪಾರ್ಷಿಯಾಲಿಟಿ ಮಾಡುವುದಕ್ಕೆ ಏನು ಕಾರಣ ? ಯಾವ ದೃಷ್ಟಿಯಿಂದ ಬಿಟ್ಟಿದ್ದೀರಿ ? ಮಾನ್ಯ ಬೊಮ್ಮಾಯಿಯವರು ಅದೇ ಜಿಲ್ಲೆಯವರಾದರೂ ಏಕೆ ಬಿಟ್ಟಿದ್ದಾರೆ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲ್ ಮತ್ತು ಮಾನ್ಯ ಬೊಮ್ಮಾಯಿಯವರ ಮಧ್ಯೆ ಏನಿದೆಯೋ ನನಗೆ ಗೊತ್ತಿಲ್ಲ.....

SRI K. H. PATIL.—I cannot understand what the Minister says ನಿಮಗೆ ಗೊತ್ತಿಲ್ಲ ಎಂದು ಹೇಳಿದರೆ ಹೇಗೆ ? ಗೊತ್ತಿಲ್ಲದೆ ಹೋದರೆ ಉತ್ತರ ಹೇಳಬೇಡಿ. ನಿಮ್ಮ ರಿಪೋರ್ಟ್‌ನಲ್ಲಿ ಒಂದು ಭಾಗದೊಳಗೆ ಕಡಿಮೆ ಇದೆಯೆಂದು ಹೇಳಿದ್ದೀರಿ. ಮತ್ತೊಂದು ಕಡೆ ಹೆಸರು ಸೇರಿಸುವುದನ್ನು ಬಿಟ್ಟಿದ್ದೀರಿ. ಕುಂದಗೋಳ, ಹುಬ್ಬಳ್ಳಿ ಹಾಕಿದ್ದೀರಿ. ಮಾನ್ಯ ಬೊಮ್ಮಾಯಿಯವರಿಗೆ ಇದು ಗೊತ್ತಿದ್ದೂ ಬಿಟ್ಟಿದ್ದಾರೆ.

ಶ್ರೀ ವೀರಣ್ಣ.—ಮಾನ್ಯ ಬೊಮ್ಮಯಿಯವರಿಗೆ ಗೊತ್ತಿದ್ದೂ ಬಿಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ, ನಾನು ಪಾಟೀಲರು ಮತ್ತು ಬೊಮ್ಮಾಯಿಯವರ ಮಧ್ಯೆ ಏನಿದೆಯೋ ನನಗೆ ಗೊತ್ತಿಲ್ಲ ಎಂದು ಪಾತ್ರ ಹೇಳಿದೆ. ಮತ್ತೆ ಬೇರೆ ಏನೂ ನಾನು ಹೇಳಲಿಲ್ಲ.

ವಿವಿಧ ಸಹಕಾರ ಸಾಲಗಳಂ ಬೇರೆ ಬೇರೆ ವರ್ಗದ ರೈತರಿಗೆ ಮಂಜೂರು ಮಾಡಿದ ಬಗ್ಗೆ

೧೦೦ (೩೩೧) ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಯಾವ ವರ್ಗದ ರೈತರುಗಳಿಗೆ ಯಾವ ಯಾವ ಸಾಲದ ಬಾಬ್ತು ಎಷ್ಟೆಷ್ಟು ಸಾಲವನ್ನು ರಿಯಾಯಿತಿ ಕೊಡಲಾಗಿದೆ.

ಆ) ಯಾವ ಯಾವ ಸಹಕಾರ ಸಂಘಗಳ ಹಾಗೂ ವಾಣಿಜ್ಯ ಬ್ಯಾಂಕುಗಳ ಮೂಲಕ ದೊರೆತಿರುವ ಸಾಲಕ್ಕೆ ಈ ರಿಯಾಯಿತಿ ದೊರೆಕಿದೆ ?

ಇ) ಇದರಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ೧೯೮೭–೮೮ನೇ ಸಹಕಾರಿ ಸಾಲು ೧-೭-೮೭ರಿಂದ ಪ್ರಾರಂಭವಾಗಿದ್ದು, ವಸೂಲಾತಿ. ಕಾರ್ಯವು ಈಗ ತಾನೆ ಆರಂಭವಾಗಿದೆ, ೧೯೮೭-೮೮ನೇ ಸಾಲು ೩೦-೬-೮೮ಕ್ಕೆ ಮುಗಿಯುತ್ತದೆ ಆದಕಾರಣ ವಸೂಲಾತಿಗೆ ಸಂಬಂಧಿಸಿದ ಬಡ್ಡಿ ಸಹಾಯಧನ ನೀಡುವ ಪ್ರಶ್ನೆ ಈಗ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ,

ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ನನ್ನ ಪ್ರಶ್ನೆ ಬಡ್ಡಿಯ ಸಹಾಯಧನಕ್ಕೆ ಸಂಬಂಧಿಸಿದ್ದಲ್ಲ ಸರಕಾರ ಕಳೆದ ಮೂರು ತಿಂಗಳ ಹಿಂದೆ ಒಂದು ಘೋಷಣೆಯನ್ನು ಮಾಡಿತು. ರಾಜ್ಯದ ರೈತರಿಗೆ ಸುಮಾರು ಆರು ಕೋಟಿ ರೂಪಾಯಿಗಳ ವಿನಾಯಿತಿ ಕೊಡಲಾಗಿದೆ ಎಂದು ಘೋಷಣೆ ಮಾಡಿತು. ನಾನು ಇದರ ಬಗ್ಗೆ ಪ್ರಶ್ನೆ ಹಾಕಿರತಕ್ಕದ್ದು. ತಾವು ಇದಕ್ಕೆ ಉತ್ತರ ಕೊಡಿ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆ ಈ ರೀತಿ ಇದೆ. ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವ ಯಾವ ವರ್ಗದ ರೈತರುಗಳಿಗೆ, ಯಾವ ಯಾವ ಸಾಲದ ಬಾಬ್ತು ಎಷ್ಟೆಷ್ಟು ಸಾಲವನ್ನು ರಿಯಾಯಿತಿ ಕೊಡಲಾಗಿದೆ ಎಂದು ಪ್ರಶ್ನೆ ಹಾಕಿದ್ದಾರೆ. ೧೯೮೭-೮೮ನೇ ಸಾಲು ೧-೭-೮೭ ರಿಂದ ಪ್ರಾರಂಭವಾಗುತ್ತದೆ. ಅವರು ಬೇರೆ ಪ್ರಶ್ನೆಯನ್ನು ಕಳುಹಿಸಿ ಹಿಂದಿನ ಸಾಲಿನ ವಿವರಗಳನ್ನು ಕೇಳಿದರೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ಹಿಂದೆ ರೈತರು ಪಡೆದಿರತಕ್ಕಂಥ ಸಾಲಗಳಿಗೆ ೧೯೮೭-೮೮ನೇ ಸಾಲಿನಲ್ಲಿರಿಯಾಯಿತಿ ಕೊಡಬೇಕೆಂದು ಇವರು ಘೋಷಣೆ ಮಾಡಿ ೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಯಾವ ಯಾವ ವರ್ಗದ ರೈತರಿಗೆ ಎಷ್ಟೆಷ್ಟು ರಿಯಾಯಿತಿ ಕೊಟ್ಟಿದ್ದೀರಿ ಎಂದು ಪ್ರಶ್ನೆ ಹಾಕಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿದಾರೆ, ಅವರು ೧೯೮೬-೮೭ನೇ ಸಾಲು ಎಂದು ಕೇಳಿದ್ದರೆ ಅವರಿಗೆ ಸರಿಯಾದ ಉತ್ತರ ಸಿಗುತ್ತಿತ್ತು. ಅವರು ೧೯೮೭-೮೮ನೇ ಸಾಲಿನ ಬಗ್ಗೆ ಕೇಳಿದ್ದಾರೆ. ಆದು ಈಗತಾನೆ ಪ್ರಾರಂಭವಾಗಿದೆ. ಯಾವ ಕಂತುಗಳೂ ವಸೂಲಾವತಿ ಆಗುವುದಕ್ಕೆ ಇನ್ನೂ ಸಿಗದಿಯಾಗಿಲ್ಲ. ಮುಂದಿನ ವರ್ಷಕ್ಕೆ ಇದನ್ನು ಹೇಳುವುದಕ್ಕೆ ಸಾಧ್ಯ. ೧೯೮೬-೮೭ರ ಸಾಲದ ವಿವರಗಳನ್ನು ಕೇಳಿದರೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ.